ಮನೆಯಲ್ಲಿ ಇದ್ದೂ ಇದ್ದೂ ಅವಕ್ಕೂ ಬೇಜಾರಾಗಿರುತ್ತೆ. ಅಮ್ಮನ ಜೈಲಿಂದ ಹೊರಗೆ ಹಾರಿ ಜಗವ ನೋಡುವ ತವಕ. ಹೀಗಾಗಿ ರಂಪಾಟ ಮಾಡಿಕೊಂಡೇ ಜೋತು ಬೀಳುತ್ತವೆ. ಒಪ್ಪದಿದ್ದರೆ ಕೆಲ ಮಕ್ಕಳಂತೂ ತಕ್ಷಣ ನೆಲದ ಮೇಲೆ ಬಿದ್ದು ರಂಪಾಟ ನಡೆಸಬಲ್ಲವು. ಧಡಬಡ ಮಣ್ಣುಮಸಿ ಮೈಮೇಲೆಳೆಕೊಂಡು ಬೂದುಗುಡ್ಡೆಕತ್ತೆ ಥರ ಹೊರಳಾಡಿ ಮಣಿಸಬಲ್ಲವು. ನನ್ನ ಮಗಳೂ ಹೀಗೆ ಮಾಡಿಯಾಳೆಂದು ಹೆದರಿ ಅವಳನ್ನು ಕರೆದುಕೊಂಡು  ಕಬಾಬ್ ಸೆಂಟರ್‌ಗೆ ಹೋದೆ. ಸೂಫಿ ಖುಷಿಯಿಂದ ಮೈಕುಣಿಸುತ್ತಾ ಏನೇನೋ ಗುನುಗುತ್ತಿದ್ದಳು. ನನಗೆ ಏನೊಂದೂ ತಿಳಿಯುತ್ತಿರಲಿಲ್ಲ.

ಅಲ್ಲಿ ಜನ ಸಾಲುಗಟ್ಟಿದ್ದರು. ಆತ "ಕಾಯಬೇಕು ಸರ್, ಅರ್ಜೆಂಟಾಗಲ್ಲ" ಎಂದು ಸರಕಾರಿ ಆಸ್ಪತ್ರೆ ನರ್ಸ್ ಮಾದರಿಯ ಖಡಕ್ ಉತ್ತರ ಕೊಟ್ಟ. 'ಗಿರಾಕಿ ಇಲ್ಲದ ಸಮಯದಲ್ಲಿ ನೊಣ ಹೊಡೆಯುತ್ತಾ ದಾರಿಯಲ್ಲಿ ಹೋಗಿ ಬರೋರ ಮುಸುಡಿ ಆಸೆಗಣ್ಣಿಂದ ನೋಡುತ್ತಾನೆ ಬಡ್ಡೀಮಗ. ಈಗ ಜನ ಹೆಚ್ಚಾದ ತಕ್ಷಣ ನೋಡಿದ್ಯಾ ನನ್ಮಗನ ದೌಲತ್ತಿನ ಉತ್ತರ' ಎಂದು ಮನಸ್ಸು ತಿವಿಯಿತು. 'ಸತ್ತ ಕೋಳಿ ಸುಡೋ ಇವನಿಗೆ ಅದೆಷ್ಟು ಸೊಕ್ಕು' ಎಂದು ಉರಿದುಕೊಂಡೆ. ಆರ್ಡರ್ ಕೊಟ್ಟು ಮಗಳ ಜೊತೆ ಬೀದಿಯಲ್ಲೇ ನಿಂತೆ. ಅಲ್ಲಿ ಕೂರುವ ಜಾಗವೂ ಇರಲಿಲ್ಲ. ನಿಂತು ತಿನ್ನುವ ಟೇಬಲ್ಲೂ ಅದರ ಮೇಲೆ ನೀರಿನ ಪ್ಲಾಸ್ಟಿಕ್ ಜಗ್ಗುಗಳು ನಿಂತಿದ್ದವು. ಕತ್ತಲು ಸಂಪೂರ್ಣ ಕವಿದು ಬೆಳಕಿನ ದೀಪಗಳು ಮೂಡಿಕೊಂಡವು.

ಅಷ್ಟರಲ್ಲಿ 'ಲಟಾಸ್ ಪಟಾಸ್' ಮಾತು ಕಲಿತಿದ್ದ ನನ್ನ ಮಗಳು ಕುಣಿದಾಡುತ್ತಾ ಏನೋ ಹೇಳುತ್ತಿದ್ದಳು. ನನ್ನ ಶರ್ಟಿನ ತುದಿ ಹಿಡಿದು ಜಗ್ಗುತ್ತಿದ್ದಳು. ''ಏನು ಮಗಳೆ ಚಾಕ್ಲೇಟ್ ಬೇಕಾ" ಎಂದೆ. ಬೇಡವೆಂಬಂತೆ ಕತ್ತು ಅಲ್ಲಾಡಿಸಿದಳು. "ಮತ್ತೇನು ಎತ್ಕೊಬೇಕಾ" ಎಂದೆ. ಹ್ಞೂ ಎಂದಳು. ಈ ಮಕ್ಕಳನ್ನು ಬಹಳ ಹೊತ್ತು ಎತ್ತಿಕೊಂಡು ನಿಲ್ಲುವುದೂ ಒಂದು ಥರದ ಹಿಂಸೆ. ಒದ್ದಾಡುವ, ಬಟ್ಟೆ ಹಿಡಿದು ಎಳೆದಾಡುವ, ಹಟ ಹಿಡಿದು ಸತಾಯಿಸುವ, ಕುಣಿದಾಡಿ ನಮ್ಮ ಹೆಗಲ ಸೋಫಾಸೆಟ್ಟು ಮಾಡಿಕೊಂಡು ಎಗರಾಡುವ ಮಕ್ಕಳು ರೇಜಿಗೆ ಹುಟ್ಟಿಸುತ್ತವೆ. ಕೆಲವೊಮ್ಮೆ ತೆಗೆದು ಬಾರಿಸಬೇಕು ಎನ್ನುವಷ್ಟು ಕೋಪ ಕೂಡ ತರಿಸುತ್ತವೆ.

ಪುಟಾಣಿ ಇದ್ದಾಗ ಬೆರಳು ಚೀಪುತ್ತಾ ಭಾರ ಕಮ್ಮಿ ಇದ್ದಾಗ ಹೂ ಹಗುರ ಎನಿಸುತ್ತವೆ. ಎತ್ತಿ ಮುದ್ದಾಡಲು ಖುಷಿ ಎನಿಸುವುದೂ ಹೌದು. ಇವೇ ಮಕ್ಕಳು ಬೆಳೆದಂತೆ ಎತ್ತಿಕೊಳ್ಳುವ ಧೈರ್ಯ ಕಮ್ಮಿಯಾಗಿ ಸಿಟ್ಟು ನೆತ್ತಿಗೇರುತ್ತದೆ. ನಮ್ಮ ಮೂಡು ಸರಿಯಿಲ್ಲದ ಹೊತ್ತಿನಲ್ಲಿ ಅವು ಕ್ಯಾತೆ ತೆಗೆದು ಎತ್ತಿಕೊಳ್ಳಿ ಎಂದು ಹಟ ಮಾಡಿದರೆ ಸರಿಯಾಗಿ ಬಿದ್ದವು ಎಂದೇ ಲೆಕ್ಕ. ಸಂತೆಯಲ್ಲಿ, ಜಾತ್ರೆಯಲ್ಲಿ, ಅಂಗಡಿ ಮುಂದೆ 'ಇದು ಕೊಡಿಸು' ಎಂದು ರಚ್ಚೆಗೆ ಬೀಳುವ ಮಕ್ಕಳು ಅವ್ವನ ಕೈಯಲ್ಲಿ ಚಚ್ಚಿಸಿಕೊಳ್ಳುವುದು ಗ್ಯಾರಂಟಿ. ಅವೇ ಮಕ್ಕಳು ಬೆಳೆದು ವಯಸ್ಸಾದಾಗ ನಮಗೆ ತಿರುಗಿ ಚಚ್ಚುವುದೂ ಕೂಡ ಅಷ್ಟೇ ಗ್ಯಾರಂಟಿ. ನಾವು ರೆಡಿಯಾಗಬೇಕಷ್ಟೆ.

ಆಯಿತೆಂದು ಒದ್ದಾಡುತ್ತಿದ್ದ ಮಗಳ ಎತ್ತಿಕೊಂಡು ನಿಂತೆ. ಕಿವಿಯಲ್ಲಿ ಆಕೆ ಮೆಲ್ಲಗೆ ಉಸಿರುತ್ತಾ "ಪಪ್ಪಾ ಕಕ್ಕಾ" ಎಂದಳು. ನನಗೆ ಗಾಬರಿಯಾಯಿತು. ಮನೆ ದೂರವಿದೆ. ಎಲ್ಲೆಲ್ಲೂ ಹತ್ತಿರ ಶೌಚಾಲಯಗಳಿಲ್ಲ. ಮೇಲಾಗಿ ಅವಳು ಅರ್ಜೆಂಟ್ ಎನ್ನುತ್ತಿದ್ದಾಳೆ. "ಮನೆಗೆ ಹೋಗೋ ತನಕ ತಡ್ಕೋತೀಯಾ ಕಂದ" ಎಂದೆ. ನಿಸ್ಸಾಹಾಯಕಳಾಗಿ ಆಗಲ್ಲ ಎಂದು ಮುಖ ಕಿವುಚಿದಳು. ಪಾಪ ಮಗು ಕಷ್ಟದಲ್ಲಿದೆ. ಏನು ಮಾಡುವುದೆಂದು ತೋಚದೆ ಕಂಗಾಲಾದೆ. ತಕ್ಷಣ ಮುಂದೆ ಕತ್ತಲಲ್ಲಿ ಖಾಲಿ ಬಿದ್ದಿದ್ದ ಸೈನ್ಸ್ ಫೀಲ್ಡಿನ ದೊಡ್ಡ ಮೈದಾನ ನೋಡಿದೆ. ಜೀವ ಬಂತು. ರಸ್ತೆಯ ಬೆಳಕು ಅಲ್ಲಿಗೆ ಕೊಂಚಕೊಂಚ ಎರಚಾಡುತ್ತಿತ್ತು. ತಕ್ಷಣ ಮಗುವನ್ನು ಎತ್ತಿಕೊಂಡು ಓಡಿದೆ. ತಡವಾದರೆ ಎಲ್ಲಿ ಮೈಮೇಲೇ ಕೊಡುವುತ್ತಾಳೋ ಎಂಬ ಭಯ ಬೇರೆ.